# ‘ಸ್ನೇಹಕ್ಕೆ ಸಾವಿಲ್ಲ..’

ಯಾರೂ ಬೇಡ, ಒಂಟಿಯಾಗಿಯೇ ಇರುತ್ತೇನೆ ಎಂದು ಅಂದುಕೊಂಡಿದ್ದ ನನಗೆ ಕಾಲೇಜಿನಲ್ಲಿ ಎಲ್ಲರ ಜತೆ ಸೇರಿದಾಗ ಆದ ಆನಂದ ಅಪರಿಮಿತ. ಎಲ್ಲರೂ ಒಟ್ಟಾಗಿ ಹೋದ ಪ್ರವಾಸದ ಅನುಭವ ಮಾತ್ರ ಎಂದಿಗೂ ಮರೆಯುವಂಥದ್ದಲ್ಲ.

■ ಲಕ್ಷ್ಮೀ ಪೂಜಾರ, ವಿಜಯಪುರ



ಮೊದಲಿನಿಂದಲೂ ಒಂಟಿ ಜೀವನವನ್ನು ಬಯಸುತ್ತಿದ್ದಳು ನಾನು. ಯಾರೂ ಬೇಡ ಒಂಟಿ, ಒಂಟಿ.. ಈ ಒಂಟಿ ಅನ್ನೋ ಪದದಲ್ಲೇ ನಾನು ಸಂಪೂರ್ಣ ಖುಷಿ ಕಾಣಬಲ್ಲೆ ಎಂದು ಅಂದುಕೊಂಡಿದ್ದೆ. ಆದರೆ ಖುಷಿಗಿಂತ ಅದು ನನಗೆ ಕೊಟ್ಟಿದ್ದು ಜಾಸ್ತಿ ಅಳುವನ್ನು. ನನಗೆ ಯಾರು ಇಲ್ಲ, ನನ್ನನ್ನು ಯಾರು ಇಷ್ಟ ಪಡು ವುದಿಲ್ಲ, ನಾನು ಜಾಣೆ ಅಲ್ಲ.. ಹೀಗೆ ಕೆಲವೊಂದಿಷ್ಟು ಪ್ರಶ್ನೆಗಳನ್ನು ನನಗೆ ನಾನೇ ಆವಾಗಾವಾಗ ಹಾಕಿಕೊಳ್ಳುತ್ತಿದ್ದೆ. ನನ್ನ ಮುಖದಲ್ಲೇ ನಗು ನೋಡುವುದಕ್ಕೋ ಏನೋ? ಕೆಲವೊಂದಿಷ್ಟು ಮುತ್ತುಗಳ ಹತ್ತಿರ ದೇವರು ನನ್ನನ್ನು ಕಳುಹಿಸಿದ.

ನಾನು ಮನಸಾರೆ ನಕ್ಕಿದ್ದು ಮುತ್ತುಗಳೆಲ್ಲಾ ನನಗೆ ಸಿಕ್ಕಾಗ. ಆ ಮುತ್ತುಗಳ ಮೊದಲ ಪರಿಚಯದಲ್ಲಿ ಸ್ವಲ್ಪ ಹೆದರಿಕೆ, ಮುಜುಗರ. ಆದರೆ ಆ ಹೆದರಿಕೆ ಮೊದಲ ದಿನದಲ್ಲಿ ಮಾತ್ರ. ಅವರ ಹತ್ತಿರ ದಿನಂಪ್ರತಿ ಕಾಲ ಕಳೆಯುತ್ತಿಲ್ಲ ವಾದರೂ ವಾರದಲ್ಲಿ ಎರಡು ದಿನದಂತೆ ಸಿಕ್ಕಾಗಲಾದರೂ ಅವರ ಅಮೂಲ್ಯವಾದ ಸ್ನೇಹವನ್ನು ಸಂಪಾದಿಸುವ ಜಾಯಮಾನ ನನ್ನದಾಗಿತ್ತು.

ಯಾರೂ ಹತ್ತಿರ ಇಲ್ಲದಾದಾಗ, ಪುಸ್ತಕವೆಂಬ ಸಂಗಾತಿಯ ಜೊತೆಗೆ ಇರುತ್ತಿದ್ದೆ. ಬರವಣಿಗೆಯ ಮೂಲಕ ಪ್ರತಿಯೊಂದು ಮಾತನ್ನು ಅಚ್ಚು ಹಾಕುವ (ಬರೆಯುವ) ಮೂಲಕ ನನ್ನ ಅನಿಸಿಕೆಗಳನ್ನು ಹೊರಗಡೆಹುವ ತವಕ.

ಶಾಲಾ ದಿನಗಳನ್ನು ಮರೆಯಲುಂಟೇ. ಒಂದು ಗುರುವಾರ ದಿನ ಎಲ್ಲ ಗೆಳತಿಯರೂ ಸೇರಿ ‘ನಮ್ಮ ಸ್ನೇಹ ಸಾವಿರ ವರ್ಷ ಗಟ್ಟಿಯಾಗಿರಲಿ, ಯಾವುದೇ ಮನಸ್ತಾಪಕ್ಕೂ, ಕಾರಣಕ್ಕೂ ದೂರಾಗಬಾರದು’ ಎಂಬ ಆಶಯದೊಂದಿಗೆ ಸಾಯಿಬಾಬ ಮಂದಿರಕ್ಕೆ ಹೋದೆವು. ಎಲ್ಲರೂ ಒಟ್ಟಾಗಿ ಕುಳಿತುಕೊಂಡು ಪ್ರಸಾದ ಸವಿದೆವು. ಎಲ್ಲರ ಬಾಯಿಗಳಿಗೂ ಒಬ್ಬರೇ ಪ್ರಸಾದ ತೆಗೆದುಕೊಂಡು ಹಾಕುತ್ತಿದ್ದರು. ಆಗ ನನಗೆ ‘ಸ್ನೇಹಕ್ಕೆ ಸಾವಿಲ್ಲ; ಅದು ನಮ್ಮನ್ನು ನೋಡಿ ಹೆದರಿಕೊಳ್ಳುತ್ತೆ’ ಎಂಬ ವಿಚಾರ ಖಾತ್ರಿಯಾಯಿತು. ನಮ್ಮ ಸ್ನೇಹ ನೆನಪಿನಲ್ಲಿ ಉಳಿಯಲು ನಾವೆಲ್ಲರೂ ಒಂದು ಉಪಾಯ ಹುಡುಕಿದೆವು. ಆ ನೆನಪು ನಮ್ಮನ್ನು ಬಿಟ್ಟು ಅಗಲಬಾರದೆಂಬ ಕಾರಣಕ್ಕೆ ಎಲ್ಲರೂ ಸೇರಿ ‘ಒನ್ ಡೇ ಟ್ರಿಪ್’ ಗೆ ಹೋಗುವ ಪ್ಲ್ಯಾನನ್ನು ಮಾಡಿಕೊಂಡೆವು. ಅದು ಅಂದುಕೊಂಡದ್ದಕ್ಕಿಂತ ಎರಡು ದಿನ ಮೊದಲಿಗೆ ನಾವು ಹೋಗಲು ಎಲ್ಲಾ ತಯಾರಿಯನ್ನು ಮಾಡಿದೆವು. ಟ್ರಿಪ್ ಎಂದಾಗ ಎಲ್ಲರೂ ಅವರವರ ಆಲೋಚನೆಯನ್ನು ಬಿಚ್ಚಿಟ್ಟರು. ‘ಹೀಗೆ ಎಂಜಾಯ್ ಮಾಡೋಣ, ಹಾಗೆ ಕುಣಿದಾಡೋಣ’ ಅಂತೆಲ್ಲ ಬೆಟ್ಟದಷ್ಟು ಆಸೆಯನ್ನು ಇಟ್ಟುಕೊಂಡೆವು.

ಅಂತೂ ಟ್ರಿಪ್‌ಗೆ ಹೋಗುವ ಸಮಯ ಒದಗಿ ಬಂದೇಬಿಟ್ಟಿತು. ಆ ಮುಂಜಾನೆ ಎಲ್ಲರ ಮುಖದಲ್ಲೂ ಎಲ್ಲಿಲ್ಲದ ಉತ್ಸಾಹ, ಉಲ್ಲಾಸ. ಅಂತರಂಗ ದಿಂದ ಬಂದ ನಗುವಿನಿಂದ ಪಯಣ ಸುಖಮಯವಾಗಿರಲಿ ಎಂದು ಮತ್ತೆ ನಮ್ಮ ದೇವರಲ್ಲಿ ಕೇಳಿಕೊಂಡೆವು. ಬಸ್ಸಿನ ಒಳಗಡೆ ನಾವೆಲ್ಲರೂ ಆಸೀನರಾದೆವು. ಶಿರಸಿ, ಸಹಸ್ರಲಿಂಗ, ಮುಂಡಗೋಡ ಮುಂತಾದ ಜಾಗ ಗಳನ್ನು ನಮ್ಮ ಪ್ರವಾಸಕ್ಕೆಂದು ಆಯ್ದುಕೊಂಡಿದ್ದೆವು.

‘ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ’ ಎಂದು ಗುನುಗುನುತ್ತಾ ಪಯಣದಲ್ಲಿ ಸಾಗಿದೆವು. ಆದರೆ ಬಸ್ ಹೊರಡುವುದನ್ನೇ ಕಾಯುತ್ತಿದ್ದ ನಾವು ಹೊರಟ ನಂತರ ಸೀಟಿಗೆ ಒರಗಿ ಸುಮ್ಮನೆ ಕುಳಿತುಕೊಳ್ಳದೆ ಬಸ್ಸಿನಲ್ಲಿ ಹಾಕಿರುವ ಹಾಡಿನ ಜೊತೆಗೆ ಧ್ವನಿಗೂಡಿಸಿ ಸಂಗೀತ, ನಾದ, ಲಯಕ್ಕೆ ತಕ್ಕಂತೆ ತಾಳ ಹಾಕಲು ಶುರು ಮಾಡಿದೆವು. ಕುಳಿತಿರುವ ಸೀಟನ್ನು ಬಿಟ್ಟು ಬಸ್ ಅಲುಗಾಡಿ ಹೋಗುವ ಹಾಗೇ ಹಾಡುಗಳಿಗೆ ಸ್ಟೆಪ್ ಹಾಕಿದೆವು. ನಮ್ಮ ಆ ಸ್ಟೆಪ್ಸ್ ಎಲ್ಲಿಯವರೆಗೂ ಮುಂದುವರೆಯಿತೆಂದರೆ ನಾವು ಮೊದಲಿಗೆ ನೋಡಬೇಕೆಂದುಕೊಂಡ ಸ್ಥಳವಾದ ಸಹಸ್ರಲಿಂಗದವರೆಗೆ, ನಮ್ಮನ್ನು ನಾವು ಮರೆತು ನರ್ತಿಸುವಾಗ ಸಹಸ್ರಲಿಂಗ ಬಂದೇ ಬಿಟ್ಟಿತು. ಅಲ್ಲಿರುವ ಲಿಂಗಗಳ ದರ್ಶನ ಮಾಡಿಕೊಂಡು ನೀರಿನ ಜೊತೆ ಆಟವಾಡಿದ ಫೋಟೋಗಳಿಗೆ ಸಾಕ್ಷಿಯಾಗಿದ್ದೆವು. ಮನೆಯಿಂದ ತಂದ ಅವಲಕ್ಕಿ ಮತ್ತು ಮೈಸೂರು ಪೇಡಾ ಹಾಗೇ ಖಾರಾದಾನಿಯನ್ನು ಒಬ್ಬರಿಗೊಬ್ಬರು ತಿನ್ನಿಸುತ್ತಾ ಪಯಣದ ಮುಂದಿನ ದಾರಿಯನ್ನು ನೋಡತೊಡಗಿದೆವು. ಬಳಿಕ ಬುದ್ಧನ ಪ್ರತಿಮೆಗೆ ಹೆಸರಾಗಿರುವ ಮುಂಡಗೋಡದಲ್ಲಿ ಬಂದಿಳಿದೆವು.

ತ್ಯಾಗ ಮತ್ತು ಶಾಂತಿಯ ಪ್ರತೀಕವಾದ ಬುದ್ಧನ ಸನ್ನಿಧಿಗೆ ಬಂದು ಬುದ್ಧನ ಪ್ರತಿಮೆ ಇರುವ ವಿಹಾರದಲ್ಲಿ ಕೆಲ ನಿಮಿಷಗಳ ಕಾಲ ಪ್ರಾರ್ಥಿಸಿದೆವು. ಅಲ್ಲಿರುವ ಸೌಂದರ್ಯದ ಸೊಬಗನ್ನು ಕಣ್ಣಿಗೆ ಒತ್ತಿಕೊಂಡು ಎಲ್ಲರೂ ಒಟ್ಟಾಗಿ ನಿಂತು ಛಾಯಾಚಿತ್ರ ತೆಗೆದುಕೊಂಡೆವು. ಅಲ್ಲಿಂದ ನಂತರ ಉಪಾಹಾರ ಮುಗಿಸಿಕೊಂಡು ಶಿರಸಿಯ ಮಾರಿಕಾಂಬ ದೇವಸ್ಥಾನಕ್ಕೆ ಬಂದು ದೇವರ ದರ್ಶನ ಮಾಡಿ ಅಲ್ಲಿರುವ ಕೋಣ ಕಂಡು ಬೆರಗಾದೆವು.

ಅಲ್ಲಿಂದ ಮುಂದೆ ನಮ್ಮ ಪಯಣ. ಮತ್ತೆ ಹಾಡು ನೃತ್ಯಗಳ ಮೂಲಕ ನಮ್ಮೂರ ದಾರಿ ಹಿಡಿದೆವು. ಕತ್ತಲಾಗಿದೆ, ಮನೆಗೆ ಹೋಗಬೇಕು, ಆದರೆ ನನ್ನ ಓರಗೆಯ ಸಹಪಾಠಿಗಳನ್ನು ಬಿಟ್ಟು ಹೋಗಲಿಕ್ಕೆ ಮನಸ್ಸಿಲ್ಲ. ಈಗ ದೂರವಾದರೆ ಮತ್ತೆ ಸಿಗುವರೇ ಎಂಬ ಆತಂಕ. ಆ ಆತಂಕದ ಹೊರೆ ಹೊತ್ತು ಮನೆಯತ್ತ ಪಯಣ ನಡೆಸಿದೆ. ದಾರಿಯಗುಂಟ ಆಲೋಚನೆ. ಈಗ ಮನೆಗೆ ಹೋದರೆ ನನ್ನ ಸ್ವಾತಂತ್ರ್ಯವನ್ನು ಕಟ್ಟಿ ಮೂಲೆಗೆಸೆಯಬೇಕಲ್ಲ ಎಂದು. ಆದರೂ ಬೇಸರವಿಲ್ಲ ನನ್ನ ಸ್ವಾತಂತ್ರ್ಯ ಮತ್ತೆ ಕಾಲೇಜಿಗೆ ಹೋದಾಗ ಸಿಕ್ಕೇ ಸಿಗುತ್ತೆ ಎಂದುಕೊಂಡು ರೂಮಿಗೆ ಹೋಗಿ ಪ್ರವಾಸದ ನೆನಪುಗಳನ್ನು ಮೆಲುಕು ಹಾಕುತ್ತಾ ಮಲಗಿಕೊಂಡೆ. ಈಗಲೂ ಈ ನೆನಪು ಮನದಾಳದಲ್ಲಿ ಭದ್ರವಾಗಿ ಕುಳಿತಿದೆ. ■